ನಿವೇಶನಗಳ ನಿರ್ಮಾಣಕ್ಕೆ 2008–09ರ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ರೂ.6245.16 ಲಕ್ಷಗಳ (ನಗರ ನಿವೇಶನಗಳಿಗೆ ರೂ.6068.16 ಲಕ್ಷಗಳು ಮತ್ತು ಗ್ರಾಮೀಣ ನಿವೇಶನಗಳಿಗೆ ರೂ.177 ಲಕ್ಷಗಳು) ಅನುದಾನವನ್ನು ಒದಗಿಸಿದೆ.

4. ವಸತಿ ಹೀನರಿಗೆ ನಿವೇಶನಗಳನ್ನು ಕೊಟ್ಟು, ನಂತರ ಆಶ್ರಯ ಮನೆಗಳ ನಿರ್ಮಾಣಕ್ಕೆ ಅನುದಾನ ನೀಡುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ.

ನಿವೇಶನ ರಹಿತರಿಗೆ ನಿವೇಶನವನ್ನು ನೀಡಲು ಈಗಾಗಲೇ ಆಶ್ರಯ ನಿವೇಶನ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯಡಿ ಲಭ್ಯವಿರುವ ಸರ್ಕಾರಿ ಭೂಮಿಯನ್ನು ಆಶ್ರಯ ಯೋಜನೆಗೆ ವರ್ಗಾಯಿಸಿಕೊಂಡು ಬಡಾವಣೆ ರಚಿಸಿ ನಿವೇಶನಗಳನ್ನು ನೀಡಲಾಗುತ್ತಿದೆ. ಒಂದು ವೇಳೆ ಸರ್ಕಾರಿ ಭೂಮಿ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನುಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ಖರೀದಿಸಿ ನಿವೇಶನಗಳನ್ನು ಒದಗಿಸಲಾಗುತ್ತಿದೆ. ನಿವೇಶನ ಒದಗಿಸಿ ನಂತರ ಸದ್ಯ ಅನುಷ್ಠಾನದಲ್ಲಿರುವ ಗ್ರಾಮೀಣ ಆಶ್ರಯ, ಗ್ರಾಮೀಣ ಅಂಬೇಡ್ಕರ್, ಇಂದಿರಾ ಆವಾಸ್ ಮತ್ತು ನಗರ ಆಶ್ರಯ ಯೋಜನೆಗಳ ಮೂಲಕ ವಸತಿ ಸೌಕರ್ಯ ಕೊಡಬಹುದಾಗಿದೆ. ಇದಲ್ಲದೆ ವಸತಿ ರಹಿತರಿಗೆ ನಿವೇಶನಗಳನ್ನು ವಿತರಿಸಿ, ನಂತರ ವಿತರಿಸಲಾದ ನಿವೇಶನದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು 2006ರಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಆಯ್ಕೆಯಾದ 1200 ಗ್ರಾಮಗಳಲ್ಲಿ ಪ್ರತಿ ಗ್ರಾಮದಲ್ಲಿ ಕನಿಷ್ಟ 10 ಎಕರೆಯಂತೆ ಜಮೀನನ್ನು ಖರೀದಿಸಲು ಸರ್ಕಾರದಿಂದ ಈಗಾಗಲೇ ರೂ.25.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಮೊದಲ ಹಂತದಲ್ಲಿ ನಿವೇಶನಗಳನ್ನು ವಿತರಿಸಿ, ನಂತರ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶ ಹೊಂದಲಾಗಿದೆ.

ಸಂಖ್ಯೆ :ವಇ 25 ಹೆಚ್ಎಎಂ 2009 **(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)**
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

170 ಧ್ರುವ ನಾರಾಯಣ್ ಆರ್.(ಕೊಳ್ಳೇಗಾಲ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ. ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು;

ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ 140.00ಕೋಟಿರೂಗಳನ್ನು ಒದಗಿಸಲಾಗಿದೆ.

ಆ. ಸೈಕಲ್ ಪೂರೈಸಲು ಯಾವ ಯಾವ ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಸೈಕಲ್ ಪೂರೈಸಲು ಮೆ:ಅಟ್ಲಾಸ್ ಸೈಕಲ್ಸ್(ಹ) ಲಿ., ಮಧ್ಯಪ್ರದೇಶ, ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ, ಹೀರೋ ಸೈಕಲ್ಸ್ ಲಿ., ಲೂಧಿಯಾನ ಮತ್ತು ಏವನ್ ಸೈಕಲ್ಸ್ ಲಿ., ಲೂಧಿಯಾನ. ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಇ. ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಸೈಕಲ್‌ಗಳ ಗುಣಮಟ್ಟಕ್ಕೆ ಸರಿಸಮಾನವಾದವುಗಳಾಗಿವೆಯೇ;

ಬೈಸಿಕಲ್‌ಗಳ ಗುಣಮಟ್ಟವನ್ನು ಭಾರತೀಯ ಗುಣಮಟ್ಟ ಮಾಪನದಲ್ಲಿ ನಿಗಧಿಗೊಳಿಸಿರುವಂತೆ ಕಾಯ್ದುಕೊಳ್ಳಲಾಗಿದೆ.

ಈ. ಹಾಗೆ ಪೂರೈಸಲಾಗುತ್ತಿರುವ ಪ್ರತಿ ಸೈಕಲ್‌ನ ಬೆಲೆ ಎಷ್ಟು;

ಪ್ರತಿ ಬೈಸಿಕಲ್‌ನ ದರ ರೂ.2397/–ಕ್ಕೆ ನಿಗಧಿಗೊಳಿಸಿದೆ.

ಉ. 2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ಏಳು ಲಕ್ಷ ವಿದ್ಯಾರ್ಥಿಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಸೈಕಲ್ ನೀಡಲಾಗಿದೆ?

2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಈವರೆಗೆ 1,82,102 ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.

ಇಡಿ:49: ಯೋಯೋಕ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

171 ಶ್ರೀ ಧ್ರುವನಾರಾಯಣ್ ಆರ್. (ಕೊಳ್ಳೇಗಾಲ)

ಇಂಧನ ಸಚಿವರು.

****

ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು;

ಆ) ಅದಕ್ಕೆ ತಗಲುತ್ತಿರುವ ಉತ್ಪಾದನಾ ವೆಚ್ಚ ಎಷ್ಟು;